# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ

ದೂರವಾಣಿ ಸಂಖ್ಯೆ: 08354-201354
ಫ್ಯಾಕ್ಸ್ ಸಂಖ್ಯೆ: 08354-235152
ಮೊ: 9480696389
Email: registrar@uhsbagalkot.edu.in

ಕುಲಸಚಿವರ ಕಾರ್ಯಾಲಯ,
ಉದ್ಯಾನಗಿರಿ,
ನವನಗರ,
ಬಾಗಲಕೋಟೆ – 587 104


ಸಂಖ್ಯೆ: ಕು/ತೋವಿವಿಬಾ/ಸೇ.ವಿ./ಸೇ.ಸಿ.ಮುಂಬಡ್ತಿ–2019/144/2020–21 ದಿನಾಂಕ: 07.08.2020

## ಸೇರ್ಪಡೆ ಆದೇಶ

ವಿಷಯ: 2019ನೇ ಸಾಲಿನ ಸೇವಾ ಸಿಬ್ಬಂದಿಯವರ ಮುಂಬಡ್ತಿಗಾಗಿ ಅರ್ಹತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ: 1. ದಿನಾಂಕ: 31.12.2019 ರಂದು ಇದ್ದಂತೆ ಶಿಕ್ಷಕೇತರ ನೌಕರರ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವ ಸುತ್ತೋಲೆ ಸಂಖ್ಯೆ: ಕು/ತೋವಿವಿಬಾ/ಜೇ.ಪ./99/2020–20 ದಿ. 04.06.2020

2. ವಿಶ್ವವಿದ್ಯಾಲಯವು ಹೊರಡಿಸಿರುವ ಮುಂಬಡ್ತಿ ಅರ್ಹತಾ ಪಟ್ಟಿ ದಿನಾಂಕ 26.06.2020.
3. ದಿನಾಂಕ: 24.07.2020 ರಂದು ಜರುಗಿದ 2019 ರ ಶಿಕ್ಷಕೇತರ ನೌಕರರ ಮುಂಬಡ್ತಿ ಮೇಲ್ಮನವಿ ಪ್ರಾಧಿಕಾರದ ಸಭೆಯ ಶಿಫಾರಸ್ಸುಗಳು.
4. ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟೆ ಇವರ ಅನುಮೋದನೆ ದಿ:07.08.2020

ತೋ.ವಿ.ವಿ. ಬಾಗಲಕೋಟೆಯಲ್ಲಿ ವಿವಿಧ ವೃಂದಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕೇತರ ಸಿಬ್ಬಂದಿಯವರ ಅಂತಿಮ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ(1) ರನ್ವಯ ಪ್ರಕಟಿಸಲಾಗಿದೆ. ಮುಂದುವರೆದು, 2019ನೇ ಸಾಲಿಗೆ ಸೇವಾ ಸಿಬ್ಬಂದಿಯವರ ಮುಂಬಡ್ತಿಗೆ ಸಂಬಂಧಪಟ್ಟಂತೆ ವಿಶ್ವವಿದ್ಯಾಲಯ ವಿರಚಿತ ಮುಂಬಡ್ತಿ ಪರಿಶೀಲನಾ ಸಮಿತಿಯು ದಿನಾಂಕ: 23.06.2020 ರಂದು ಸಭೆ ಸೇರಿ ವಿವಿಧ ವೃಂದಗಳಿಗೆ ಮುಂಬಡ್ತಿಗಾಗಿ ನಿಗದಿಪಡಿಸಿದ ವಿದ್ಯಾರ್ಹತೆ, ಪ್ರಸ್ತಾಪಿತ ನೌಕರರ ಅರ್ಹತೆ, ಜೇಷ್ಠತೆ, ಸರಕಾರದ ಆದೇಶಗಳನ್ವಯ ಮೀಸಲಾತಿ ಹಾಗೂ ನೌಕರರ ಗೌಪ್ಯ ವರದಿಗಳು ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ. ಈ ರೀತಿ ಪ್ರಸ್ತಾಪಿತ ನೌಕರರನ್ನು ಜೇಷ್ಠತೆ ಆಧಾರದ ಮೇಲೆ ಹಾಗೂ ಪ್ರಸ್ತುತ ವೃಂದದಲ್ಲಿ ಅವರುಗಳು ಕಾರ್ಯನಿರ್ವಹಿಸಿದ ವಾಸ್ತವಿಕ ದಿನಾಂಕದ ಹಾಗೂ ಮೀಸಲಾತಿ ಆಧಾರದ ಮೇಲೆ ಮುಂಬಡ್ತಿಗೆ ಪರಿಗಣಿಸಲು ಶಿಫಾರಸ್ಸು ಮಾಡಿದ್ದು, ಅದರಂತೆ ಅರ್ಹತಾ ಪಟ್ಟಿಯನ್ನು ದಿನಾಂಕ 26.06.2020ರಂದು ಪ್ರಕಟಿಸಿ, ಮೇಲ್ಮನವಿಗಳನ್ನು ಸಲ್ಲಿಸಲು ಸಿಬ್ಬಂದಿಗಳಿಗೆ 15 ದಿನಗಳ ಕಾಲಾವಕಾಶವನ್ನು ನೀಡಲಾಗಿರುತ್ತದೆ. ಪೂರಕವಾಗಿ, ಉಲ್ಲೇಖ(2)ರ ಸ್ವೀಕೃತಗೊಂಡ ಮೇಲ್ಮನವಿಗಳನ್ನು ದಿನಾಂಕ 24.07.2020ರಂದು ಜರುಗಿದ ಮೇಲ್ಮನವಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಲಾಗಿದ್ದು, ಪ್ರಾಧಿಕಾರವು ಕೂಲಂಕುಷವಾಗಿ ಪರಿಶೀಲಿಸಿ, ಸಂಬಂಧಿಸಿದ ನೌಕರರಿಗೆ ಹಿಂಬರಹಗಳನ್ನು ನೀಡಲು ಹಾಗೂ ಓರ್ವ **'ಔಷಧಿಕಾರರ'** ಮನವಿಯನ್ನು ಮುಂಬಡ್ತಿಗೆ ಪರಿಗಣಿಸಲು ತನ್ನ ಶಿಫಾರಸ್ಸು ನೀಡಿರುತ್ತದೆ. ಉಲ್ಲೇಖ(3)ರ ಈ ಹಿನ್ನಲೆಯಲ್ಲಿ ಮೇಲ್ಮನವಿ ಪ್ರಾಧಿಕಾರದ ಶಿಫಾರಸ್ಸುಗಳನ್ವಯ ಮುಂಬಡ್ತಿಗೆ ಅರ್ಹರಿರುವ ನೌಕರರ **"ಅರ್ಹತಾ ಪಟ್ಟಿ"**ಯನ್ನು ಅನುಬಂಧದಲ್ಲಿ ತಿಳಿಸಿರುವಂತೆ ಈ ಮೂಲಕ ಹೊರಡಿಸಿ ಸಂಬಂಧಪಟ್ಟ ನೌಕರರ ಗಮನಕ್ಕೆ ತರಲಾಗಿದೆ. ಸದರಿ ಅರ್ಹತಾ ಪಟ್ಟಿಯು ತೋ.ವಿ.ವಿ. ಬಾಗಲಕೋಟೆಯ ಅಂತರ್ಜಾಲ www.uhsbagalkot.in ನಲ್ಲಿಯೂ ಲಭ್ಯವಿರುತ್ತದೆ.

ಸದರಿ ಅರ್ಹತಾ ಪಟ್ಟಿಯಿಂದಾಗಿ ಯಾವುದೇ ನೌಕರರು ಬಾಧಿತರಾಗಿದ್ದಲ್ಲಿ, ಈ ಅಧಿಸೂಚನೆ ಹೊರಡಿಸಿದ 15 ದಿವಸದೊಳಗಾಗಿ ಮೇಲ್ಮನವಿಯನ್ನು ಮಾನ್ಯ ಕುಲಪತಿಗಳು, ತೋ.ವಿ.ವಿ., ಬಾಗಲಕೋಟೆ, ಇವರಿಗೆ ಸಲ್ಲಿಸತಕ್ಕದ್ದು. ನಿಗದಿಪಡಿಸಿದ ದಿನಾಂಕದ ನಂತರ ಸ್ವೀಕೃತಗೊಂಡ ಮೇಲ್ಮನವಿಗಳನ್ನು ಪರಿಗಣಿಸಲಾಗುವುದಿಲ್ಲ.

ಆದೇಶದ ಮೇರೆಗೆ,

**ಕುಲಸಚಿವರು.**
**ತೋ.ವಿ.ವಿ.ಬಾಗಲಕೋಟೆ**

ಗೆ,
ಸಂಬಂಧಿಸಿದ ನೌಕರನಿಗೆ.

**ಪ್ರತಿಯನ್ನು ಮಾಹಿತಿಗಾಗಿ:**

1. ವಿಶ್ವವಿದ್ಯಾಲಯದ ಎಲ್ಲ ಅಧಿಕಾರಿಗಳು.
2. ಎಲ್ಲ ಡೀನ್/ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು/ಮುಖ್ಯಸ್ಥರುಗಳು, ಸಂಶೋಧನಾ ಕೇಂದ್ರ, ಅಖಿಲ ಭಾರತ ಸಮನ್ವಯ ಸಂಶೋಧನಾ ಯೋಜನೆ, ವಿಸ್ತರಣಾ ಘಟಕಗಳು, ಕೃಷಿ ವಿಜ್ಞಾನ ಕೇಂದ್ರ,
3. ಮಾನ್ಯ ಕುಲಪತಿಗಳವರ ಆಪ್ತ ಕಾರ್ಯದರ್ಶಿಗಳು, ತೋ.ವಿ.ವಿ., ಬಾಗಲಕೋಟೆ ಇವರ ಮಾಹಿತಿಗಾಗಿ.

Scanned by CamScanner

**ಅನುಬಂಧ**

## ಉಳಿದ ಮಾತೃ ವೃಂದದಡಿ ಮುಂಬಡ್ತಿ

## ಮುಂಬಡ್ತಿ ಅರ್ಹತಾ ಪಟ್ಟಿ

(ಈ ಕಛೇರಿ ಸೇರ್ಪಡೆ ಆದೇಶ ಸಂಖ್ಯೆ: ಕು/ತೋವಿವಿಬಾ/ನೇ.ವಿ./ಸೇ.ಸಿ.ಬಡ್ತಿ–2019/2020–21/14 ದಿನಾಂಕ: 07.08.2020)

**ಔಷಧಿಕಾರ ಹುದ್ದೆಯಿಂದ ಹಿರಿಯ ಔಷಧಿಕಾರ ಹುದ್ದೆಗೆ ಮುಂಬಡ್ತಿ**

**(Rs. 37900-950-39800-1100-46400-1250-53900-1450-62600-1650-70850)**

| ಕ್ರ.ಸಂ. | ಹೆಸರು ಮತ್ತು ವಿದ್ಯಾರ್ಹತೆ | ಕೆಲಸದ ಸ್ಥಳ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ | ತೋ.ವಿ.ವಿ.,ಗೆ ಸೇರಿದ ದಿನಾಂಕ | ಪ್ರಸಕ್ತ ಹುದ್ದೆಗೆ ಸೇರಿದ ದಿನಾಂಕ |
|---|---|---|---|---|---|---|
| 1. | ಶ್ರೀ ಮಹೇಶ ಎಲ್. ನಾಯ್ಕ (ಪ.ಜಾ)<br>ಡಿಪ್ಲೋಮಾ ಇನ್ ಫಾರ್ಮಸಿ | ತೋವಿವಿ,<br>ಬಾಗಲಕೋಟೆ | 02.05.85 | - | 05.08.16 | 05.08.16 |

ಕುಲಸಚಿವರು.
ತೋ.ವಿ.ವಿ.ಬಾಗಲಕೋಟೆ

Scanned by CamScanner